ಬೆಟ್ಟದಷ್ಟಿತ್ತು, ಅದನ್ನಿನ್ನೂ ತೀರಿಸಬೇಕಿತ್ತು. ಮತ್ತೆ ಯಾವ ಮುಖವಿಟ್ಟು ಅವರ ಬಳಿ ಹೋಗುವುದು? ಅವರು ಕೂಡಾ ಭಾವೇಶ್ ಅವರನ್ನು ತಮ್ಮ ಹತ್ತಿರ ಸುಳಿಯಲೂ ಬಿಡುತ್ತಿರಲಿಲ್ಲ. ಅಮ್ಮ ತೀರಿಕೊಂಡ ಮೇಲೆ ಸಂಬಂಧಿಕರೆಲ್ಲ ಭಾವೇಶನನ್ನು ಹಬ್ಬ ಹರಿದಿನ ಮದುವೆಗಳಿಗೆ ಕರೆಯುವುದನ್ನೇ ನಿಲ್ಲಿಸಿಬಿಟ್ಟಿದ್ದರು. ಎಲ್ಲಿ ಈತ ಮತ್ತೆ ಹಣ ಕೇಳುತ್ತಾನೋ ಎಂಬ ಭಯ ಅವರದು. ಆದರೂ ಬೇರೆ ದಾರಿ ಇರಲಿಲ್ಲ. ಮತ್ತೆ ಎಲ್ಲ ಸಂಬಂಧಿಗಳನ್ನು ಭೇಟಿ ಮಾಡಿ ಒಂದಿಷ್ಟು ಧನ ಸಹಾಯವನ್ನು ಕೈ ಮುಗಿದು ಬೇಡಿದರು. 'ನೀವು ಐನೂರು, ಸಾವಿರ ಎಷ್ಟಾದರೂ ಸರಿ ದಯವಿಟ್ಟು ಕೊಡಿ. ನನ್ನ ಮೇಲೆ ವಿಶ್ವಾಸವಿಡಿ. ನಿಮ್ಮ ಒಂದೊಂದು ಪೈಸೆಯನ್ನೂ ನಾನು ಹಿಂತಿರುಗಿಸುತ್ತೇನೆ. ಹತ್ತು ಸಾವಿರವಾದರೂ ತಂದೆಯ ಕೈಯಲ್ಲಿ ಇಟ್ಟು ಹೋಗುವ ಆಲೋಚನೆ' ಎಂದು ಅವರಲ್ಲಿ ತಮ್ಮ ಯೋಜನೆಯನ್ನು ವಿವರಿಸಿ ಪ್ರಾರ್ಥಿಸಿದರು. ಕೊನೆಗೂ ಹತ್ತು ಸಾವಿರ ಕೂಡಿತು. ತಂದೆಯ ಕೈಯಲ್ಲಿ ಆ ಹಣವನ್ನು ಇಟ್ಟು ಹೇಳಿದರು, 'ನಾನು ಎನ್.ಎ.ಬಿ.ನಲ್ಲಿ ಉಳಿದು ಏನಾದರೂ ಕಲಿತು ಹಿಂತಿರುಗಿ ಬರುತ್ತೇನೆ. ಮತ್ತೆ ಹೊಸ ಬದುಕನ್ನು ಆರಂಭಿಸೋಣ''.

ಸ್ಕಿಜೋಫ್ರೇನಿಯಾ ಗುಳಿಗೆಗಳ ಪರಿಣಾಮ ತಂದೆಗೆ ಹಗಲು ಹೊತ್ತು ನಿದ್ರೆ. ಮೇಜಿನ ಮೇಲೇ ಅನೇಕ ಬಾರಿ ತಲೆ ಇಟ್ಟು ಮಲಗುವರು. ಕೆಲಸ ಹೆಚ್ಚಿರಲಿಲ್ಲ. ರಾತ್ರಿ ಎದ್ದು ಕುಳಿತು ಯಾರೋ ತನ್ನನ್ನು ಕೊಲ್ಲಲು ಬರುತ್ತಿದ್ದಾರೆ ಎಂದು ಭಯಭೀತರಾಗುವರು. ಹಾಗೆಂದೇ ತಂದೆಯನ್ನು ಬಿಟ್ಟು ಎನ್.ಎ.ಬಿ.ಗೆ ಹೋಗಲು ಮನದಲ್ಲಿ ಅಳುಕಿತ್ತು. ಈಗ ಮಾಲಿಯನ್ನು ಕರೆದು ತಂದೆಯತ್ತ ಗಮನ ಕೊಡಲು ಪ್ರಾರ್ಥಿಸಿದರು.

ದಿನಾಂಕ 1 ಜನವರಿ 1995ರಂದು ಮಹಾಬಲೇಶ್ವರದಿಂದ ಬಾಂಬೆಗೆ ಹೊರಟರು. ಎನ್.ಎ.ಬಿ.ಯ 'ವರ್ಲ್ಡ್ ಸೀ ಫೇಸ್'ನ ಪುನರ್ವಸತಿ ಕೇಂದ್ರದಲ್ಲಿ ಅವರು ದಾಖಲಾಗಬೇಕಿತ್ತು. ಇದು ಇಡೀ ಭಾರತದ ಮುಖ್ಯಾಲಯ. ಇಲ್ಲಿ ಸುಮಾರು 200 ಜನ ಕೆಲಸ ಮಾಡುತ್ತಾರೆ. ಅಲ್ಲಿ ಬ್ರೈಲ್ ಮುದ್ರಣಾಲಯವಿದೆ. ಆಡಿಯೋ ಗ್ರಂಥಾಲಯವೂ ಇದೆ. ಈ ಗ್ರಂಥಾಲಯದಲ್ಲಿ ಐದು ಲಕ್ಷಕ್ಕೂ ಹೆಚ್ಚು ಪುಸ್ತಕಗಳು ಆಡಿಯೊ ರೂಪದಲ್ಲಿದ್ದವು. ಅಲ್ಲೇ 'ರೋಜ್‌ಗಾರ್ ಕಾರ್ಯಾಲಯದ ಕಚೇರಿಯೂ ಇತ್ತು. ಎನ್.ಎ.ಬಿ.ಯ ಬಹಳಷ್ಟು ಪುನರ್ವಸತಿ ಕೇಂದ್ರಗಳು ಮುಂಬಯಿಯಲ್ಲಿವೆ. ಪಾಸ್ಪೋರ್ಟ್ ಕಚೇರಿಯ ಎದುರು ಒಂದು ಶಾಖೆ ಇದೆ. ಅಲ್ಲಿ ತರಪೇತಿಯ ವಿವಿಧ ಶಿಬಿರಗಳು ನಡೆಯುತ್ತವೆ. ಬ್ರಷ್ ತಯಾರಿಕೆ, ಹ್ಯಾಂಗರ್ ತಯಾರಿಕೆ, ಮೋಟಾರ್ ಬೈಂಡಿಂಗ್, ಇವೆಲ್ಲವನ್ನೂ ಅಲ್ಲಿ ಕಲಿಸುತ್ತಾರೆ. ರೇ ರಸ್ತೆಯಲ್ಲಿ ಇರುವ 'ಕಮಲಾ ಮೆಹತಾ ಪುನರ್ವಾಸ್ ಕೇಂದ್ರ'ದಲ್ಲಿ ಕುರುಡು ಮಹಿಳೆಯರಿಗೆ ಹಾರ, ತೋರಣ ಮಾಡುವುದನ್ನು ಹೇಳಿಕೊಡುತ್ತಾರೆ. ಆದರೆ ಬ್ರೈಲ್ ಲಿಪಿ, ಸರಿದಾಡಲು ಬೇಕಾದ ಕಲಿಕೆ (ಮೊಬಿಲಿಟಿ ಓರಿಯೆಂಟೇಶನ್) ಮತ್ತು ಬಹಳಷ್ಟು ಉದ್ಯೋಗಾರ್ಥವಾದ ವೊಕೇಶನಲ್ ಟ್ರೇಡ್‌ಗಳ ತರಪೇತು ಬಾಂಬೆಯ ಮಹಾಲಕ್ಷ್ಮಿ ಎಂಬಲ್ಲಿ ಇದ್ದ 'ಪುನರ್ವಾಸ ಕೇಂದ್ರ'ದಲ್ಲಿ ನೀಡುತ್ತಿದ್ದರು. ಇದು 'ಕಿಂಗ್ ಜಾರ್ಜ್ ಆಸ್ಪತಾಲ್ ಕಾಂಪೌಂಡ್' ಹೆಸರಿನಿಂದಲೂ ಕರೆಯಲ್ಪಡುತ್ತಿತ್ತು. ಇಸವಿ 1995ರ ಇದೇ ವರ್ಷ ಬಾಂಬೆ, ಮುಂಬಯಿ ಆಯಿತು.

ಆ ಕಾಂಪೌಂಡಿನಲ್ಲಿ ಬಹಳಷ್ಟು ಬೇರೆ ಬೇರೆ ಸಂಸ್ಥೆಗಳ ಕಚೇರಿಗಳಿದ್ದವು. 'ಕಿಂಗ್ ಜಾರ್ಜ್' ಬ್ರಿಟಿಷರ ಕಾಲದ ಆಸ್ಪತ್ರೆಯಾದ ಕಾರಣ, ಇಲ್ಲಿ 1000–1500 ಚದರಡಿಯ ದೊಡ್ಡ ದೊಡ್ಡ ಬ್ಯಾರಕ್‌ಗಳು ಇದ್ದವು. ಅವುಗಳಲ್ಲಿ ಎನ್.ಎ.ಬಿ.ಗೆ ಮೂರು ಬ್ಯಾರಕ್‌ಗಳು ಸಿಕ್ಕಿದ್ದವು. ಅಲ್ಲಿ ಪುನರ್ವಾಸ ಕೇಂದ್ರವಿತ್ತು. ಅಲ್ಲಿ ನಾಲ್ಕು ತಿಂಗಳ ತರಪೇತು ನೀಡಲಾಗುತ್ತದೆ. ಒಂದು ಬ್ಯಾರಕ್‌ನಲ್ಲಿ ಫಿಸಿಯೋಥೆರಪಿ ವಿಭಾಗವೂ ಇತ್ತು. ಈ ವಿಭಾಗದ ಒಂದು ಕೋಣೆಯಲ್ಲಿ ಮೋಂಬತ್ತಿ ಕಾರ್ಯಾಗಾರವೂ ಇತ್ತು. ಮಧ್ಯದ ಬ್ಯಾರಕ್‌ನಲ್ಲಿ ಕಚೇರಿಯಿತ್ತು. ಅಲ್ಲಿ ಯೋಗ ಶಿಕ್ಷಣದ ಒಂದು ಕೊಠಡಿ ಇತ್ತು.

ಬ್ರೈಲ್ ಕಲಿಸಲು ಒಂದು ಬ್ಯಾರಕ್ ಮತ್ತು ಅದರಲ್ಲಿಯೇ ಭೋಜನಾಲಯವೂ ಸೇರಿತ್ತು. ಕೊನೆಯ ಬ್ಯಾರಕ್‌ನಲ್ಲಿ ಸುಮಾರು ನೂರು ಮಂದಿ ಅಂಧ ವಿದ್ಯಾರ್ಥಿಗಳಿಗೆ ವಸತಿಯ ವ್ಯವಸ್ಥೆ ಮಾಡಲಾಗಿತ್ತು. ಇಲ್ಲಿ ಉದ್ಯೋಗಾರ್ಥವಾದ ತರಪೇತು ನೀಡುತ್ತಿದ್ದರು. 'ಇಲ್ಲಿ ಮೋಂಬತ್ತಿ ತಯಾರಿಕೆ ಕಲಿಸುತ್ತಾರೆ' ಎಂದಾಗ ಭಾವೇಶ್ ಅವರಿಗೆ ಖುಷಿಯಾಯಿತು. ಬಾಲ್ಯದಲ್ಲೇ ಅವರಲ್ಲಿ ಅರಳಿದ್ದ ಸೃಜನಶೀಲತೆ ಅಭಿವ್ಯಕ್ತಗೊಳ್ಳಲು ಹಾದಿಯಾಗಲಿತ್ತು. ಅವರ ಬೆರಳುಗಳಲ್ಲಿ ಅದ್ಭುತ ಸ್ಪರ್ಶ ಜ್ಞಾನವಿತ್ತು. ಭಾವೇಶ್ ಪ್ರಾಂಶುಪಾಲರನ್ನು ಹೋಗಿ ಭೆಟ್ಟಿ ಮಾಡಿದರು. ಅವರಲ್ಲಿ ಮೋಂಬತ್ತಿ ಮಾಡುವ ತರಪೇತನ್ನು ತನಗೆ ನೀಡಲು ಪ್ರಾರ್ಥಿಸಿದರು. ಆದರೆ ನಿರಾಶೆಯ ಪ್ರತಿಕ್ರಿಯೆ ವ್ಯಕ್ತವಾಗಿತ್ತು. ಪ್ರಾಂಶುಪಾಲರು 'ಮೋಂಬತ್ತಿ ಮಾಡುವ ತರಪೇತು, ಅರೆಕುರುಡರಿಗೆ ಅಂದರೆ ಒಂದಿಷ್ಟಾದರೂ ಕಾಣಿಸುವ ಅಂಧರಿಗೆ ಹೇಳಿಕೊಡಲಾಗುತ್ತದೆ. ನೀನು ಪೂರ್ಣ ದೃಷ್ಟಿ ಕಳೆದುಕೊಂಡಿದ್ದೀಯ. ನಿನಗೆ ಈ ತರಪೇತು ಪಡೆಯಲು ಸಾಧ್ಯವಾಗುವುದಿಲ್ಲ' ಎಂದುಬಿಟ್ಟರು.

'ಮೋಂಬತ್ತಿಯ ಬೆಳಕನ್ನೇ ನೋಡಲಾರದ ನೀನು ಮೋಂಬತ್ತಿಯನ್ನು ಹೇಗೆ ಮಾಡಬಲ್ಲೆ?' ಎಂದು ಸವಾಲೆಸೆದರು. ಇದನ್ನು ಕೇಳಿ ಭಾವೇಶ್ ಅವರಿಗೆ ಎಲ್ಲಿಲ್ಲದ ನೋವಾಯಿತು. ದೃಷ್ಟಿಬಾಧಿತ ಜನರನ್ನು ಅರ್ಥ ಮಾಡಿಕೊಳ್ಳಲಾರದ ಹೊರಗಿನ ಸಮಾಜ ಈ ಮಾತುಗಳನ್ನು ಹೇಳಿದ್ದರೆ ಅವರಿಗೆ ದುಃಖವಾಗುತ್ತಿರಲಿಲ್ಲ. ಅವರ ಅಜ್ಞಾನ ಅಂದುಕೊಳ್ಳಬಹುದಿತ್ತು. ಆದರೆ ವಿಶ್ವದ ಅಂಧರ ಹಿತಕ್ಕಾಗಿ ಕೆಲಸ ಮಾಡುತ್ತಿರುವ ಈ ಸಂಸ್ಥೆಯ ಮುಖ್ಯಸ್ಥರು ಹೀಗೆ ನುಡಿದರೆ, ಭಾವೇಶ್ ಅವರಂತಹ ದೃಷ್ಟಿಹೀನರು ಏನು ಮಾಡಬೇಕು?

ಭಾವೇಶ್ ಮಹದಾಸೆಯಿಂದ ಈ ಪುನರ್ವಸತಿ ಕೇಂದ್ರದ ಮೇಲೆ ಭರವಸೆ ಇಟ್ಟು ಬಂದಿದ್ದರು. ಬಹುಶಃ ಭಾವೇಶ್ ಅವರ ನಿರೀಕ್ಷೆಯೇ ಹೆಚ್ಚಿತ್ತೇನೊ. ಬಹಳಷ್ಟು ಉದಾಹರಣೆಗಳನ್ನು ಹೊತ್ತು ಅವರಲ್ಲಿಗೆ ಹೋದರು. ರವೀಂದ್ರ ಜೈನ್ ಹುಟ್ಟಿನಿಂದಲೇ ಕುರುಡರು, ಪೂರ್ತಿ ಕಣ್ಣು ಕಾಣದವರು. ಸಂಪೂರ್ಣ ದೃಷ್ಟಿಹೀನರಾದರೂ ಸಂಗೀತದ ಕ್ಷೇತ್ರದಲ್ಲಿ ಬಲು ದೊಡ್ಡ ಹೆಸರು. ನಿರಂಜನ್ ಪ್ರಾಣ್ಶಂಕರ್ ಪಾಂಡ್ಯಾ ಅವರ ಉದಾಹರಣೆಯೂ ಭಾವೇಶ್ ಅವರ ತಲೆಯಲ್ಲಿ ತಿರುಗುತ್ತಿತ್ತು. ಅವರು ದೇಶ ವಿದೇಶಗಳನ್ನು ಸುತ್ತಿ ಅಂಧರ ಪುನರ್ವಸತಿ ಕಾರ್ಯಗಳನ್ನು ಕಂಡುಬಂದಿದ್ದರು. ಪುಣೆಯ ಬ್ಲೈಂಡ್ ಮೆನ್ಸ್ ಅಸೋಸಿಯೇಷನ್ ಅನ್ನು ವರ್ಲ್ಡ್ ಬ್ಲೈಂಡ್ ಯೂನಿಯನ್‌ನ ಅಂಗಸಂಸ್ಥೆಯನ್ನಾಗಿ ಮಾಡಿದ್ದರು. ಇಂಗ್ಲೆಂಡ್, ಅಮೇರಿಕ, ರಷಿಯಾಗೆ ಹೋಗಿ ಬಂದ ಇವರು ಅಂಧ ಮಹಿಳೆಯರಿಗೆ ವೃದ್ಧಾಶ್ರಮವನ್ನೂ (ಶಿಡರ್ ಸಾಯಿಬಾಬಾ ಹೋಮ್ ಫಾರ್ ದಿ ಏಜ್ಡ್ ಬ್ಲೈಂಡ್ ವಿಮೆನ್) ಆರಂಭಿಸಲು ಕಾರಣಕರ್ತರಾಗಿದ್ದರು. ಎನ್.ಎ.ಬಿ.ಯ ಸೆಕ್ರೆಟರಿ ಜನರಲ್ ಆಗಿದ್ದ ಪದ್ಮಶ್ರೀ ಡಾ. ರಾಜೇಂದ್ರ ತನುಸುಖ್ರಾಮ್ ವ್ಯಾಸ್, ರಾಯಲ್ ಕಾಮನ್ವೆಲ್ತ್ ಸೊಸೈಟಿ ಫಾರ್ ದಿ ಬ್ಲೈಂಡ್‌ಗೆ ಏಷಿಯಾ ನಿರ್ದೇಶಕರಾಗಿದ್ದರು. ಕೇತನ್ ಕೊಠಾರೀ ಅವರು ಕೂಡಾ ಪೂರ್ಣ ದೃಷ್ಟಿ ಕಳೆದುಕೊಂಡವರು, ಎನ್.ಎ.ಬಿ.ಯಲ್ಲಿ ಡಿಸ್ಟೆನ್ಸ್ ಎಜುಕೇಶನ್‌ನ ಅಧಿಕಾರಿಯಾಗಿ ಅಮೆರಿಕದ ಹ್ಯಾಡ್ಲಿ ಅಂಧರ ಶಾಲೆಗೆ ಎನ್.ಎ.ಬಿ. ಮೂಲಕ ದೂರ ಶಿಕ್ಷಣವನ್ನು ನಡೆಸುತ್ತಿದ್ದರು. ಆದರೆ ನಿಜ, ಇಲ್ಲೆಲ್ಲೂ ಪೂರ್ತಿ ಕಣ್ಣು ಕಾಣದ ಕುರುಡನೊಬ್ಬ ಮೋಂಬತ್ತಿ ಮಾಡಿದ ಉದಾಹರಣೆ ಇರಲಿಲ್ಲ. ಹೆಜ್ಜೆ ಮೂಡದ ಹಾದಿಯಲ್ಲಿ ಹೊರಟವರು, ಸಮಾಜದ ಸಂದೇಹಗಳನ್ನು, ಅನುಮಾನಗಳನ್ನು, ಅಡೆತಡೆಗಳನ್ನು ದಾಟಿಯೇ ಸಾಗಬೇಕು. ಈ ಕ್ಷಣ ಹೊರಗಿನ ಸಮಾಜ ಮತ್ತು ಈ ಸಂಸ್ಥೆಯ ನಡುವೆ ವ್ಯತ್ಯಾಸವಾದರೂ ಏನು ಅನಿಸಿತ್ತು. ಇವರು ಕೂಡಾ ಅಂಧರ ಸಾಮರ್ಥ್ಯವನ್ನು ಅನುಮಾನಿಸಿ, ಅವಕಾಶಗಳಿಗೆ ಬಾಗಿಲು ಮುಚ್ಚಿದರೆ, ದೃಷ್ಟಿಹೀನರು ಎಲ್ಲಿ ಹೋಗಬೇಕು? ಅಂಧರಿಗಾಗಿ ದುಡಿಯುತ್ತಿರುವ ಇಂತಹ ಸಂಸ್ಥೆಗಳೇ ಭಾವೇಶ್‌ರಂತಹ ದೃಷ್ಟಿಹೀನರ ಕೊನೆಯ ಆಶಾಕಿರಣವಾಗಿದ್ದವು. ಭಾವೇಶ್ ಹತಾಶರಾಗಿ ನಿಂತಿದ್ದರು.

ಭಾವೇಶ್ ಅವರ ಬಾಡಿದ ಮುಖವನ್ನು ನೋಡಿ ಪ್ರಾಂಶುಪಾಲರು ಹೇಳಿದರು. 'ಒಂದು ಕೆಲಸ ಮಾಡಬಹುದು. ನಮ್ಮ ಸಂಸ್ಥೆಯಲ್ಲಿ ಬಾಡಿ ಮಸಾಜ್ ಮತ್ತು ಫುಟ್ ರಿಫ್ಲೆಕ್ಸೋಲಜಿಯ ಹೊಸ ಕೋರ್ಸ್ ಆರಂಭಿಸಿದ್ದೇವೆ. ನಿಮ್ಮನ್ನು ಆ ತರಪೇತಿಗೆ ಸೇರಿಸಬಲ್ಲೆ. ಉಳಿದಂತೆ ಬ್ರೈಲ್ ಲಿಪಿ, ಸ್ವತಂತ್ರವಾಗಿ ನಡೆದಾಡುವುದು ಇವುಗಳ ಬಗ್ಗೆ ನಿಮಗೆ ಏನೆಲ್ಲ ಕಲಿಯಬೇಕಿದೆಯೋ, ಅದನ್ನು ಸಂಸ್ಥೆ ಅಗತ್ಯವಾಗಿ ಕಲಿಸಿ ಕೊಡುತ್ತದೆ. ನೀವು ಆರು, ಆರೂವರೆ ಅಡಿ ಎತ್ತರದ, ಕಟ್ಟುಮಸ್ತಾದ ಆಳು. ಮಾಲೀಶು ಮಾಡುವುದನ್ನು ಕಲಿತರೆ, ನಿಮಗೂ ಸಂಸ್ಥೆಗೂ ಹೆಸರು ತರಬಲ್ಲಿರಿ' ಎಂದರು.

ಭಾವೇಶ್ ತಮ್ಮೆದುರಿಗಿದ್ದ ಆಯ್ಕೆಗಳ